ಲೇಖನ 04

# ಭೇದಿ ನಿವಾರಕ ಭೂಮಿ ಹುಣ್ಣಿಮೆ ಚರಗದಕಾಯಿ ಅಮಟೆಮರ

"ನೆಲದ ಬೊಂಬೆಗೆ ಜಲದ ಹೊದಿಕೆಯ ಹೊದಿಸಿ. ಅಗ್ನಿ ಆಭರಣ ತೊಡಿಸಿ, ಆಕಾಶದ ಅರಳೆಲೆಯ ಕಟ್ಟಿ, ವಾಯು ಸೂತ್ರಧಾರಮಂ ಹೂಡಿ ಸೂರ್ಯ ಸೋಮ ವಿಧಿಗಳೊಳಗೆ ಎಡೆಯಾಡಿಸುವ ಸೂತ್ರಿಗನಿವನಾರೋ? ಪಂಚ ಮಹಾಭೂತಗಳು ಒಂದಕ್ಕೊಂದು ಬೆಸೆದುಕೊಂಡು ನಡೆಸುವ ಕಾರ್ಯಭಾರವನ್ನು ವರ್ಣಿಸುವ ವಚನವಿದು. ಪಂಚಮಹಾಭೂತಗಳು ಸಮರ್ಪಕವಾಗಿದ್ದರೆ ಜಗದ ಜನರ ಬದುಕು. ಇಂತಹ ನೆಲ-ಜಲ-ವಾಯುಗಳ ನಡುವಿನ ಸಂಕೀರ್ಣ ವ್ಯವಸ್ಥೆ ಮಳೆ ಬೆಳೆಗಳ ಸುಸ್ಥಿರತೆಯ ಸಂಕೇತ. ಆದ್ದರಿಂದಲೇ ಮಿತ್ರರು, ನೆಂಟರನ್ನು ಕಂಡಾಗ ಮಳೆ ಬೆಳೆಗಳ ಯೋಗಕ್ಷೇಮ ವಿಚಾರಿಸುವ ಪರಿಪಾಠ ಬೆಳೆದು ಬಂದಿದೆ. ಮಾರ್ಕಾಂಡೇಯ ಪುರಾಣದಲ್ಲಿ ಮಾರ್ಕಾಂಡೇಯ ಜೈಮಿನಿ ಮಹರ್ಷಿಗಳಲ್ಲಿ ಕುಶಲೋಪರಿ ವಿಚಾರಿಸುವಾಗ ಕೇಳಿದ ಮಾತಿದು "ಕಚ್ಚಿಚ್ ಕುಶಲಂ ಬ್ರಹ್ಮನ್ ಆಶ್ರಮೇ ಮೃಗಪಕ್ಷಿಸು/ ವೃಕ್ಷೇಷಥ ಲತಾ, ಗುಲ್ಮ ತ್ವಕ್ಷಾರ ತೃಣಜಾತಿಷು" ಆಶ್ರಮದ ಮೃಗ, ಪಕ್ಷಿ, ವೃಕ್ಷ, ಬಳ್ಳಿ ಪೊದೆ, ತೊಗಟೆಯಿರುವ ಮರಗಳು, ಕಾಂಡರಹಿತ ರಸಭರಿತ ಬಾಳೆಯಂಥಹ ಗಿಡಗಳು, ಹುಲ್ಲು ಪ್ರತಿಯೊಂದು ಕುಶಲವೇ ಚೆನ್ನಾಗಿದೆಯಾ ಅಂದರೆ ಹುಲ್ಲಿನಿಂದ ಹಿಡಿದು ಕಲ್ಪವೃಕ್ಷದವರೆಗೆ ಎಲ್ಲವೂ ಇರುವ ಜೀವವಾಸ ಆರೋಗ್ಯದ ಬೀಡಾಗಬಹುದು. ನಾಡಿನಲ್ಲಿ ಸಕಲ ಜೀವ ವೈವಿಧ್ಯ ಸರಪಣಿ ಸರಿ ಇದ್ದಾಗ ಮಾತ್ರ ಅದು ಶುದ್ಧ ಪರಿಸರ ಎನ್ನಬಹುದೆಂದು ನಮ್ಮ ಪೂರ್ವಜರ ಅನುಭವ.

ವೃಕ್ಷಜಾತಿಗಳ ಸರ್ವ ಪ್ರಭೇದವೂ ಕಾಡಿನೊಳಗಿರಬೇಕು. ಅಂಥಹ ವೃಕ್ಷಗಳಲ್ಲಿ ಮಾರ್ಕಾಂಡೇಯ ಪುರಾಣದಲ್ಲಿಯೂ ಉಲ್ಲೇಖಿತ ಪ್ರಾಚೀನ ವೃಕ್ಷ ಅಮಟೆಮರ, ಗೌರಿಗಣೇಶ ಭೂಲೋಕಕ್ಕೆ ಬಂದಾಗ ಸ್ವಾಗತಿಸುವ ಫಲಾವಳಿಯಲ್ಲಿ ಅಲಂಕೃತಗೊಳ್ಳುವ ಅಮ್ರಾತಕ. ವನ ನಿರ್ಮಾಣದಲ್ಲೂ ಪಾಲ್ಗೊಳ್ಳುವ ವನರೂಪಿ ಸಸ್ಯ. ಚರಕಸೂತ್ರ, ಬೃಹತ್ಸಂಹಿತೆಯಲ್ಲೂ ವರ್ಣಿತಗೊಂಡ, ಭೇದಿ ನಿವಾರಕ ಭೂಮಿಹುಣ್ಣಿಮೆ ಪರ್ವದ ಚರಗದ ಕಾಯಿ ಅಮಟೆಮರ.



ಚಿತ್ರ ಕೃಪೆ: ರಮಕಾಂತ ನಾಯ್ಕ್

ಭಾರತದ ಉಪಖಂಡ, ಚೀನಾ ಮಲೇಷ್ಯಾ ದಕ್ಷಿಣ ಮತ್ತು ಆಗ್ನೇಯ ಏಷ್ಯಾಕ್ಕೆ ಸ್ಥಳೀಯವಾಗಿರುವ ಅಂಬಟೆಕಾಯಿಯ ಕುಲ ಜಾತಕ ನೋಡೋಣ. ಅನಕಾರ್ಡಿಯೇಸಿ ಸಸ್ಯ ಕುಟುಂಬದಲ್ಲಿ ಜನಿಸಿದ ಅಮಟೆಯ ವೈಜ್ಞಾನಿಕ ಹೆಸರು ಸ್ಪೋಂಡಿಯಾಸ್ ಪಿನ್ನಾಟ(ಮ್ಯಾಂಗಿಫೆರಾ ವೈಲ್ಡ್). ಹಿಂದಿಯಲ್ಲಿ ಅಂಬೋಧ, ಜಂಗ್ಲಿ ಆಮ್, ಇಂಗ್ಲೀಷ್ನಲ್ಲಿ ಹಾಗ್ ಪಾಮ್, ಮರಾಠಿಯಲ್ಲಿ ಅಂಬಡ, ತೆಲುಗಿನಲ್ಲಿ ಅಡವಿಮಾಮಿಡಿ, ಮಲಯಾಳಿಯಲ್ಲಿ ಅಂಬಜಂಗ, ತಮಿಳಿನಲ್ಲಿ ಮಂಪುಲಿಚ್ಚಿ ಎಂದು ಕರೆಯುತ್ತಾರೆ.

ವನದಲ್ಲಿ ವಾನರರಿಗೆ ತುಂಬಾ ಪ್ರಿಯವಾದ ಹಣ್ಣು ಇದಾಗಿರುವದರಿಂದ ಮರ್ಕಟಾಮ್ರ, ಕಪಿತನ, ಕಪಿಚೂತ, ಕಪಿಪ್ರಿಯವೆಂದು, ಅಮಟೆಯಲ್ಲಿ ಹುಳಿ ಮತ್ತು ಸಿಹಿರುಚಿಯಲ್ಲಿ ದೊರೆಯುವದರಿಂದ ಮಧುರಾಮ್ಲವೆಂದು, ಮಾವಿನ ರುಚಿ ಹೊಂದಿರುವದರಿಂದ ಆಮ್ರಾತಕವೆಂದು, ರಸಭರಿತ ಹಣ್ಣುಬಿಡುವದರಿಂದ ರಸಾಢ್ಯವೆಂದು, ಆಮ್ಲವಟಕ, ವರ್ಷಪಾಕಿ, ಶೃಂಗಿಫಲ, ತನುಕ್ಷೀರ, ಅಂಬರಾತಕ ಎಂಬುದು ಸಂಸ್ಕೃತಭಾಷೆಯಲ್ಲಿನ ನಾಮಧೇಯಗಳು. ಪ್ರಾಚೀನ ಗ್ರಂಥಗಳಾದ ಅಮರಕೋಶ, ಬ್ರಹತ್ಸಂಹಿತೆ, ಧನ್ವಂತರಿ ನಿಘಂಟು, ಭಾವಪ್ರಕಾಶ ನಿಘಂಟು, ರತ್ನಮಾಲಾ, ರಾಜನಿಘಂಟು ಮಹಾಭಾರತ, ಚರಕಸೂತ್ರ ಮಾರ್ಕಾಂಡೆಯ ಪುರಾಣದಲ್ಲಿ ಅಮಟೆಮರದ ವಿವರಗಳು ಲಭ್ಯವಿದೆ. ಗ್ರಂಥಾಲಯ ಪಾಲಕ ಗೌತಮ ಮಾಡಗೇರಿ ಅವರು ನೀಡಿದ ಮಾಹಿತಿಯಂತೆ "ಆಮ್ರಾತಕಕ ಕೇತನ ನಿಕೇತಮಳಿ ಶುಕ ಪಿಕ ವಿರಚಿತ ಪಕ್ಷಪಾತ" ಎಂದು ಶಾಂತಿಪುರಾಣದಲ್ಲಿನ ಉಲ್ಲೇಖವಿದು.

ಮಾವು ಅಂಬಟೆಮರಗಳಲ್ಲಿ ಮನೆ ಮಾಡಿರುವ ದುಂಬಿ, ಗಿಳಿ ಕೋಗಿಲೆಗಳ ಹಾರಾಟದ ವೈಭವ ನೋಡಿರಿ ಎಂದು ಖೇಚರಾಜನ ಆಡಳಿತದ ಭೂಮಿಯ ವರ್ಣನೆ ಮಾಡುತ್ತಾನೆ. "ತಿಳಕಾಮ್ರಾತಕ ಬೆಲ್ಲವತ್ತ ಸಿರಿಸಾಂಕೋಲಾಖ್ಯ ಭಲ್ಲಾತಕಾಮಳಕಾದ್ಯಂತ್ರಿ ಪಮೂಳಮಂ ಬಳಸಿ ಪುತ್ತಾದಂದು" ಎಂದು ಜೈನ ಸಾಹಿತ್ಯದಲ್ಲಿ ಅಮಟೆಮರದ ಮಾಹಿತಿ. ಮುಂಡಾ ಜನಾಂಗದವರು ತೊಗಟೆಯ ಗಂಧವನ್ನು ಕೀಲು ನೋವು ಮತ್ತು ಮಾಂಸಖಂಡದ ನೋವಿಗೆ ಔಷದವಾಗಿ ಬಳಕೆ ಮಾಡುವರು.

ಪ್ರದೇಶದಿಂದ ಪ್ರದೇಶಕ್ಕೆ ಒಂದೇ ಮರದ ಸಾಂಸ್ಕೃತಿಕವಾಗಿ ಬಳಸುವ ವಿಧಾನ ಬೇರೆ ಬೇರೆಯಾಗಿರುತ್ತದೆ. ಭೂಮಿ ಹುಣ್ಣಿಮೆ ಹಬ್ಬ ಆಚರಣೆ ಮುಗಿಯುವರೆಗೂ ಅಮಟೆ ಕಾಯಿ ತಿನ್ನಬಾರದೆಂಬ ಅಲಿಖಿತ ನಿಯಮವೊಂದು ನಮ್ಮೂರಿನ ಒಕ್ಕಲಿಗ ಸಮುದಾಯದಲ್ಲಿದೆ. ಕಾರಣ ಇಷ್ಟೆ ಭೂಮಿಹುಣ್ಣಿಮೆಯ ಭೂಮಿತಾಯಿಗೆ ನೀಡುವ ಬಯಕೆ ಊಟ ಚರಗ. ಚರಗದ ಸಿದ್ದತೆಯಲ್ಲಿ ಅನ್ನ, ವಿವಿಧ ಪ್ರಕಾರದ ಸೊಪ್ಪುಗಳೊಂದಿಗೆ ಅಮಟೆಕಾಯಿಯನ್ನು ಸೇರಿಸಿ ಚರಗ ಚೆಲ್ಲುವ ಕ್ರಮ ನವಣಗೆರೆ ಸಮೀಪದ ಮುಂಡಿಗೆಹಳ್ಳಿ ಗ್ರಾಮದ ಭೂಮಿ ಪೂಜೆಯಲ್ಲಿದೆ ಎಂದವರು ವರೆಗದ್ದೆ ಮಂಜುನಾಥ ಹೆಗಡೆ. ಗಣೇಶ ಚೌತಿಯ ಮಹಾಪರ್ವದಲ್ಲಿ ಮಂಟಪದ ಎದುರಿನಲ್ಲಿ ಕಟ್ಟುವ ಫಲಾವಳಿಯ ಸಾಲಿನಲ್ಲಿ ಕಟ್ಟುವ ವಿಶಿಷ್ಟ ಸಂಪ್ರದಾಯ ಮಲೆನಾಡಿನ ಅನೇಕ ಗ್ರಾಮಗಳಲ್ಲಿದೆ ಎಂದು ಶಿರಸಿಯ ಶಿಕ್ಷಕಿ ವಿದ್ಯಾಭಟ್ ತಮ್ಮ ಮನೆಯ ಪದ್ಧತಿ ತಿಳಿಸಿದರು. ಅಮಟೆ ಮರದ ಪೂಜೆಯೊಂದಿಗೆ ಮಾರಿಜಾತ್ರೆಯ ವಿಧಿವಿಧಾನಕೆ ಚಾಲನೆ ಕೊಡುವ ಅಪರೂಪದ ರಿವಾಜು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿದೆ.

ಶಾಸ್ತ್ರೋಕ್ತವಾಗಿ ಅಮಟೆ ಮರಕೆ ಪೂಜೆ ಸಲ್ಲಿಸಿ ನಂತರ ಅದೇ ಮರದಿಂದ ಮಾರಿಕಾಂಬಾ ಮೂರ್ತಿಯನ್ನು ಕೆತ್ತನೆ ಮಾಡಿ ಜಾತ್ರೆಯ ಮಂಟಪದಲ್ಲಿ ಪ್ರತಿಷ್ಠಾಪಿಸಿ ಭಕ್ತರು ಪೂಜಿಸುವ ಕ್ರಮವಿದೆ ಎಂದು ಪತ್ರಕರ್ತ ಸುಬ್ರಹ್ಮಣ್ಯ ದಾಸನಕೋಡಿಗೆ ಮಾಹಿತಿ ನೀಡಿದರು. ನಮ್ಮೂರಿನ ಹಿಂದಿನ ಕಾಲದ ಮದುವೆಗಳಲ್ಲಿ ಕುಚಲಕ್ಕಿ ಅನ್ನ ಅಮಟೆಕಾಯಿ ಸಾಂಬಾರು ಕಡ್ಡಾಯವಿರುತ್ತಿತ್ತು.

ಕಾಡ ಅಮಟೆ, ಸಿಹಿ ಅಮಟೆ, ಹುಳಿ ಆಮಟೆ ಎಂಬ ಮೂರು ಪ್ರಭೇದಗಳನ್ನು ಗೌರಿ ಹಬ್ಬದ ಮಂಟಪದಲ್ಲಿ ಫಲವಳಿಗೆಗೆ ಕಟ್ಟುತ್ತಿದ್ದರು, ಅಮಟೆ ಮರದ ಚಕ್ಕೆ ತಂದು ಬಾಳೆಲೆಯಲ್ಲಿ ಹಾಕಿ ಸುತ್ತಿ ಬೂದಿಯಲ್ಲಿ ಬೇಯಿಸಿ ನಂತರ ರಸ ತೆಗೆದು ಚಟಿ ಮಾಡಿ ಅನ್ನದ ಜೊತೆಗೆ ಸೇರಿಸಿ ಊಟ ಮಾಡಿದಾಗ ಡಿಸೆಂಟ್ರಿ ಶಮನವಾಗುತ್ತದೆ ಇದು ನಮ್ಮ ಅಜ್ಜಿ ಮಾಡುವ ಔಷಧವಾಗಿತ್ತು. ಅಮಟೆಕಾಯಿ ಭೇದಿಗೆ ಔಷಧವೆಂದು ತಿಳಿಸಲು ಅಮಟೆ ಮರಕ್ಕೆ ಗುಮಟೆ ಕಟ್ಟಿ ಅದೊಂದು ಉಪಾಯ, ಅಜ್ಜಿಕುಂಡೆಗೆ ಗೆಜ್ಜೆ ಕಟ್ಟಿ ಅದೊಂದು ಉಪಾಯ" ಎಂಬ ಜನಪದದ ಒಂದು ನುಡಿಗಟ್ಟು ಪ್ರಚಲಿತದಲ್ಲಿದೆ ಎಂದು ಹೊನ್ನಾವರ ಕಡ್ನೀರು ಶಿಕ್ಷಕ ಎನ್.ಬಿ.ನಾಯ್ಕ ತಮ್ಮೂರಿನ ಅಮಟೆಕಾಯಿ ಕಥೆ ಹಂಚಿದರು.

ಅಡುಗೆ ಮನೆ ಸೇರಿ ಅಮಟೆಕಾಯಿ ತೆಳು ಗೊಜ್ಜು, ಮಂದನಗೊಜ್ಜು, ಉಪ್ಪಿನಕಾಯಿ, ಕೆಸುವಿನ ಪಲ್ಯರೂಪದಲ್ಲಿ ಖಾದ್ಯವಾಗಿ ಸಿದ್ದಗೊಳ್ಳುತ್ತದೆ. ಭೂಮಿ ಹುಣ್ಣಿಮೆ ಚರುಗೆ ಅಮಟೆಕಾಯಿ ಹಾಕಲೇಬೇಕು, ಮಂಗ ವಿಷಾಹಾರ ಸೇವಿಸಿದಾಗ ಅಮಟೆ ಸೊಪ್ಪನ್ನು ಜಗಿದು ವಿಷಬಾಧೆ ಪರಿಹರಿಸಿಕೊಳ್ಳುತ್ತವೆ.

ಪಿತ್ತ ಪ್ರಕೋಪಕ್ಕೆ ಅಮಟೆ ಚಕ್ಕೆ ಔಷಧ, ಅಮಟೆ ಮರ ಮತ್ತು ನುಗ್ಗೆಮರವನ್ನು ವಯೋವೃದ್ಧರ ಕೈಯಿಂದ ವೃಕ್ಷಾರೋಪಣ ಮಾಡಿಸುವ ಕ್ರಮವೊಂದು ಇತ್ತೆಂದು ಅಂದವರು ಯಲಸಿಯ ಶ್ರೀಪಾದ ಬಿಚ್ಚುಗತ್ತಿ..

ಯಾರ ಬಳಿ ಸಂಪತ್ತು ಧನಕನಕವಿಲ್ಲವೋ ಆ ರಿಕ್ತಹಸ್ತ ವ್ಯಕ್ತಿಯನ್ನು ಅಪಹಾಸ್ಯ ಮಾಡುವಾಗ, ಛೇಡಿಸುವಾಗ ನಿನ್ನ ಹತ್ತಿರ ಏನಿದೆ ಬೋಳ ಅಮಟೆಕಾಯಿ" ಎನ್ನುವ ಕಾಲವೊಂದಿತ್ತು. ಆದರೆ ಬಹುಪಯೋಗಿ ಅಮಟೆ ಚರ್ಮ ಹದ ಮಾಡುವಲ್ಲಿ ಇದರ ತೊಗಟೆ ಬಳಕೆಯಾಗುತ್ತಿತ್ತು. ಬೆಂಕಿಕಡ್ಡಿ ಮತ್ತು ಪೊಟ್ಟಣವನ್ನು ತಯಾರಿಸಲು ಉಪಯುಕ್ತ. ಅಳಿಲು, ಜಿಂಕೆ, ಕಾಡುಹಂದಿ, ಮಂಗಗಳಿಗೆ ಅಮಟೆಹಣ್ಣು ಬಲು ಇಷ್ಟ. ಅಮಟೆಯು ಅತಿಸಾರ, ಅನಿಯಮಿತ ಮುಟ್ಟು, ಅಜೀರ್ಣ ಮತ್ತು ವಾಕರಿಕೆ ಚಿಕಿತ್ಸೆಗಾಗಿ ಆಯುರ್ವೇದದಲ್ಲಿ ಉಲ್ಲೇಖಿಸಲಾದ ಸಸ್ಯವಾಗಿದೆ. ಗಂಟಲು, ಕಿವಿ, ಮೂಗು, ಕಣ್ಣುಗಳ ತೊಂದರೆಗಳಿಗೆ ಪರಿಣಾಮಕಾರಿ ಮದ್ದು. ಹುಣ್ಣು, ವಿಷವ್ರಣ, ಚರ್ಮ ವರ್ಣರಾಹಿತ್ಯ ಮತ್ತು ಸ್ತ್ರೀರೋಗಗಳಗೆ ಎಲೆ, ಬೇರು ತೊಗಟೆ ಒಳ್ಳೆಯ ಔಷಧಗಳು. ಜಾನುವಾರುಗಳ ಕಾಯಿಲೆಗೂ ಔಷಧವಾಗಿ ಬಳಕೆಯಿದೆ. ಅಂಬಟೆ ಎಲೆ ಹಾಗೂ ಹುಣಸೆ ಎಲೆಗಳನ್ನು ಹಾಕಿ ಬೇಯಿಸಿದ ನೀರನ್ನು ತಣಿಸಿ ಅದರಲ್ಲಿ ಸ್ನಾನ ಮತ್ತು ಕೈಕಾಲುಗಳಿಗೆ ಧಾರೆ ಹಿಡಿಯುವದರಿಂದ ಕೈಕಾಲು ಅವಶತೆ, ಬಲಹೀನತೆ ಶಮನವಾಗುತ್ತದೆ. ತುರಿಕೆ ಬರುವ ಗಡ್ಡೆ ತರಕಾರಿಗಳನ್ನು ಅಮಟೆ ಎಲೆಗಳಲ್ಲಿ ಸುತ್ತಿ ಕಟ್ಟಿ ಉಗಿಯಲ್ಲಿ ಒಮ್ಮೆ ಬೇಯಿಸಿ ನಂತರ ಅಡುಗೆಯಲ್ಲಿ ಬಳಸಿದಾಗ ತುರಿಕೆಯಾಗದ ಪದಾರ್ಥ ಸಿದ್ದಗೊಳ್ಳುತ್ತದೆ.

ಬೀಜಗಳಿಂದ, ಧಾರಕ ಸಸಿಗಳಿಂದ, ಸಸಿಕಡ್ಡಿಗಳಿಂದ ಸಸ್ಯಾಭಿವೃದ್ಧಿ ಮಾಡಬಹುದಾದ ಅಮಟೆ ಮರವನ್ನು ಆದಾಯಗಳಿಸುವವರು. ಬಂಗಾಲ, ಮಹಾರಾಷ್ಟ್ರ, ಅಸ್ಸಾಂನಲ್ಲಿ ಕೃಷಿಬೆಳೆಯಾಗಿ ಬೆಳೆದು ರೈತರು "ಅಂಬಷ್ಟಬಿಲ್ವಾರ್ಜುನಾಖ್ಯಾ ವಿಕಂಕತಮಹಿರುಹಾ" ಶಾಸ್ತ್ರೀಯ ವನ ನಿರ್ಮಾಣದ ನಕ್ಷತ್ರವನದಲ್ಲಿ ಹಸ್ತ ನಕ್ಷತ್ರದ ಪ್ರತಿನಿಧಿಯಾಗಿ ವೃಕ್ಷಾರೋಪಣ ಮಾಡುವ ಅಮಟೆ ಮರವನ್ನು ನಮ್ಮ ಮನೆಯ ಹಿತ್ತಲಿಲ್ಲಿ ಬೆಳೆಯೋಣ. ಹಸಿರು ಆಹಾರ ಆರೋಗ್ಯ ಹಸಿರು ಎಂಬ ಮಾತನ್ನು ಜಗದ ಜನರಿಗೆ ತಿಳಿಸೋಣ.

::::::::::::::::::::::::::::::::::::::::::::::::::

**ಉಮಾಪತಿ ಭಟ್ಟ ಕೆ ವಿ**
**ಪರಿಸರ ಕಾರ್ಯಕರ್ತರು**
**ಶಿರಸಿ**